# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೇಂಟ್/ಉಪಲೋಕ್/ಬಿಡಿ–4024/2015/ಡಿ.ಆರ್.ಇ–2

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 05/11/2019

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

ವಿಷಯ: ಅರಣ್ಯ ಇಲಾಖೆಗೆ 77.07 ಎಕರೆ, ತೋಟಗಾರಿಕೆ ಇಲಾಖೆಗೆ 1.20 ಎಕರೆ ಮತ್ತು ಕಂದಾಯ ಇಲಾಖೆಗೆ 71.21 ಎಕರೆ ಜಮೀನುಗಳ ಖಾತೆ ಪಹಣಿ ಮಾಡಲು ಮತ್ತು, ಸರ್ವೆ ನಂ. 46ರಲ್ಲಿ ಮೈಸೂರು ಮಹಾರಾಜರ ಆದೇಶದಂತೆ ಒಟ್ಟು 300 ಎಕರೆ ಮುತ್ತುಗದಹಳ್ಳಿ ಮೀಸಲು ಅರಣ್ಯಕ್ಕೆ 1926ರಲ್ಲಿ ಮಂಜೂರಾದ ಜಮೀನು 1960ರಲ್ಲಿ ಪಹಣಿ ಬಂದಾಗ ಅರಣ್ಯ ಇಲಾಖೆಯ ಹೆಸರು ಬಿಟ್ಟು ಹೋಗಿರುವುದನ್ನು ಸರಿಪಡಿಸುವಂತೆ, ಅದರಲ್ಲಿ ಸದರಿ 300 ಎಕರೆ ಜಮೀನು ಪೈಕಿ ಸರ್ಕಾರವು 91 ಎಕರೆಯನ್ನು ತೋಟಗಾರಿಕೆ ಇಲಾಖೆಗ ಮಂಜೂರು ಮಾಡಿರುತ್ತದೆ. ಆದ್ದರಿಂದ, ಉಳಿದ 209 ಎಕರೆಯನ್ನು ಅರಣ್ಯ ಇಲಾಖೆಯ ಹೆಸರಿಗೆ ಖಾತೆ ಪಹಣಿ ಮಾಡುವ ಬಗ್ಗೆ ಸೂಕ್ತ ಕ್ರಮ ಜರುಗಿಸುವುದರ ನಡವಳಿಕೆ ಕುರಿತು ವರದಿ.

*****

ಶ್ರೀ. ಸಿದ್ದಲಿಂಗೇಗೌಡ, ಮಾವಿನಕೆರೆ ಗ್ರಾಮದ ನಿವಾಸಿ, ತುರುವೇಕೆರೆ ತಾಲ್ಲೂಕು, ತುಮಕೂರು ಜಿಲ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಈ ದೂರನ್ನು, (1) ಕಾಮಾಕ್ಷಮ್ಮ, ತಹಶೀಲ್ದಾರ್, ಚಿಕ್ಕನಾಯಕನಹಳ್ಳಿ ತಾಲ್ಲೂಕು, (2) ಇ.ಪ್ರಕಾಶ್, ಭೂದಾಖಲೆಗಳ ಉಪನಿರ್ದೇಶಕರು, ತುಮಕೂರು (3) ಮಂಜುನಾಥ ಧನವೆ, ಭೂದಾಖಲೆಗಳ ಸಹಾಯಕ ನಿರ್ದೇಶಕರು,ತಿಪಟೂರು, (4) ಬಸವರಾಜು, ಉಪತಹಶೀಲ್ದಾರ್, ನಾಡಕಚೇರಿ, ಹುಲಿಯೂರು, (5) ಮಹೇಶ್, ಸೂಪರ್‌ವೈಸರ್, ಚಿಕ್ಕನಾಯಕನಹಳ್ಳಿ ತಾಲ್ಲೂಕು ಕಛೇರಿ, (6) ಸಿ.ಆರ್.ಬಸವರಾಜು, ತಾಲ್ಲೂಕು ಸರ್ವೆಯರ್, ಚಿಕ್ಕನಾಯಕನಹಳ್ಳಿ ತಾಲ್ಲೂಕು ಕಛೇರಿ, (7) ಹನುಮಂತನಾಯಕ, ಕಂದಾಯ ನಿರೀಕ್ಷಕರು, ಹುಲಿಯೂರು, ಚಿಕ್ಕನಾಯಕನಹಳ್ಳಿ ತಾಲ್ಲೂಕು, (8) ಮಂಜುನಾಥ, ಗ್ರಾಮ ಲೆಕ್ಕಿಗರು, ಹುಲಿಯೂರು, ಚಿಕ್ಕನಾಯಕನಹಳ್ಳಿ ತಾಲ್ಲೂಕು, ಮತ್ತು (9) ಆರ್. ರವಿಕುಮಾರ್, ಭೂದಾಖಲೆಗಳ ಸಹಾಯಕ ನಿರ್ದೇಶಕರು,ತಿಪಟೂರು, (ಇನ್ನು ಮುಂದೆ '1 ರಿಂದ 9ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ತನಿಖೆ ನಡೆಸಿ ಸೂಕ್ತ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ.

ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ದೂರಿನ ಸಂಕ್ಷಿಪ್ತ ವಿವರ: ದೂರುದಾರರು ತಮ್ಮ ದೂರಿನಲ್ಲಿ ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕು ಅಂಬಾಪುರ ಗ್ರಾಮದ ಸ.ನಂ.46ರಲ್ಲಿ ಆಕಾರ್ ಬಂದಿನಂತೆ ಒಟ್ಟು 421 ಎಕರೆ 35 ಗುಂಟೆ ವಿಸ್ತೀರ್ಣದ ಜಮೀನಿರುತ್ತದೆ. 300 ಎಕರೆ ಪ್ರದೇಶ 1926ರಲ್ಲಿ ಮೈಸೂರು ಮಹಾರಾಜರ ಅಧಿಸೂಚನೆಯಂತೆ ಮುತ್ತುಗದಹಳ್ಳಿ ಅರಣ್ಯ ಮೀಸಲು ಎಂದು ಗುರುತಿಸಲಾಗಿದ್ದು ಇದರಲ್ಲಿ 91 ಎಕರೆಯನ್ನು 1974ರಲ್ಲಿ ತೋಟಗಾರಿಕೆ ಇಲಾಖೆಗೆ ವರ್ಗಾಯಿಸಲಾಗಿದ್ದು, ಉಳಿದ 121 ಎಕರೆ 35 ಗುಂಟೆ ಗೋಮಾಳ ಜಮೀನು ಎಂದು ಕಂದಾಯ ಇಲಾಖೆ ವ್ಯಾಪ್ತಿಯಲ್ಲಿರುತ್ತದೆ. 1977ರಲ್ಲಿ 3 ಪ್ರತ್ಯೇಕ ಪ್ರಕರಣಗಳಲ್ಲಿ ಒಟ್ಟು 225 ಎಕರೆ ಭೂಮಿಯನ್ನು ಬಡವರು, ದಲಿತರು, ಭೂರಹಿತರಿಗೆ ಹೀಗೆ 78 ಮಂದಿಗೆ ಮಂಜೂರು ಮಾಡಲಾಗಿದೆ. ಏಕವ್ಯಕ್ತಿ ಕೋರಿಕೆಯ ಮೇರೆಗೆ 2014ರಲ್ಲಿ ದುರಸ್ತಿಪಡಿಸಿ ಖಾತೆ ಮಾಡಿಸಲು ಆದೇಶ ಕೋರಿ ಡಿಡಿಎಲ್ಆರ್., ತುಮಕೂರು ಅವರಿಗೆ 1ನೇ ಎದುರುದಾರರು ಕಡತ ಸಲ್ಲಿಸಿದ್ದು, ಆ ಬಾಬ್ತು ಡಿಡಿಎಲ್ಆರ್ ಕಛೇರಿಯಿಂದ 58 ಮಂದಿಗೆ ಮಾತ್ರ ಖಾತೆ ದಾಖಲಿಸಲು ಅನುಮತಿ ನೀಡಲಾಗಿರುತ್ತದೆ. ಸರ್ವೆ ಕಾರ್ಯಕ್ಕೆ ನೀಡಿದ ನೋಟೀಸಿನಲ್ಲಿ ಬಹುತೇಕ ಹಕ್ಕುದಾರರ ಪರ ತಿಪಟೂರು ತಾಲ್ಲೂಕಿನ ಕೆಬಿ ಕ್ರಾಸಿನ ಎಸ್.ರುದ್ರೇಶ್ ಎಂಬುವವರ ಹೆಸರು ನಮೂದಿಸಿರುವುದು ಕಂಡುಬರುತ್ತದೆ. ಈ ಬಗ್ಗೆ ಖಾತೆ ಮಾಡಲು ಉಪವಿಭಾಗಾಧಿಕಾರಿ, ತಿಪಟೂರು ಅವರಿಗೆ ಕಡತವನ್ನು ಸಲ್ಲಿಸಿದಾಗ ಉಪವಿಭಾಗಾಧಿಕಾರಿಯವರಿಗೆ ಅನೇಕ ಲೋಪದೋಷಗಳು ಕಂಡುಬಂದಿರುತ್ತವೆ. ಅದರಲ್ಲಿ ಮೀಸಲು ಅರಣ್ಯಕ್ಕೆ ಸೇರಿದ ಭೂಮಿಯನ್ನು ಕಾನೂನುಬಾಹಿರವಾಗಿ ಮೇಲ್ಕಂಡ 78 ಮಂದಿಗೆ ಮಂಜೂರಾಗಿತ್ತೆಂದು ಕಂಡುಬಂದಿರುತ್ತದೆ. ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಕಂದಾಯ ಅಧಿಕಾರಿಗಳು ಹಾಗೂ ಸರ್ವೆ ಇಲಾಖೆಯ ಎದುರುದಾರರು ಭೂಮಾಫಿಯಾರವರೊಂದಿಗೆ ಕೈಜೋಡಿಸಿ ಸರ್ಕಾರಿ ಭೂಮಿಯನ್ನು ಕಬಳಿಸಲು ಕೆಲಸ ಮಾಡಿರುತ್ತಾರೆಂದು ಕಂಡುಬಂದಿರುತ್ತದೆ. ಕಾರಣ ಸದರಿಯವರ ವಿರುದ್ಧ ಕ್ರಮಕೈಗೊಳ್ಳಲು ಕೋರಿಕೊಂಡಿರುತ್ತಾರೆ.

3. ದೂರು ದಾಖಲಾದ ನಂತರ ಪ್ರಕರಣವನ್ನು ತುಮಕೂರು ಲೋಕಾಯುಕ್ತ ಪೋಲೀಸರಿಂದ ತನಿಖೆ ಮಾಡಲು ಮತ್ತು ಎದುರುದಾರರಿಂದ ಆಕ್ಷೇಪಣೆಯನ್ನು ಸಲ್ಲಿಸಲು ತಿಳಿಸಲಾಗಿತ್ತು.

4. 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಚಿಕ್ಕನಾಯಕನಹಳ್ಳಿ ತಾ.ಸ.ನಂ.46ರಲ್ಲಿ ಅಂದಿನ ತಹಶೀಲ್ದಾರರು ದರಕಾಸ್ತು ಮಂಜೂರಾತಿ ಪ್ರಕರಣ ಸಂ.ಎಲ್.ಎನ್.ಡಿ. ಎಸ್.ಆರ್.136/74–75 ದಿ.15.4.77ರಂತೆ 40 ಜನರಿಗೆ, ಎಲ್.ಎನ್.ಡಿ. ಎಸ್.ಆರ್.55/76–77 ದಿ.19.1.78ರಂತೆ 30 ಜನರಿಗೆ, ಎಲ್.ಎನ್.ಡಿ. ಎಸ್.ಆರ್.226/76–77 ದಿ.31.1.77ರಂತೆ ಒಬ್ಬರಿಗೆ, ಒಟ್ಟು 225 ಎಕರೆ ಜಮೀನು ಮಂಜೂರು ಮಾಡಿರುತ್ತಾರೆ. ಸದರಿ ದರಕಾಸ್ತು ಮಂಜೂರಿಯ ಪ್ರಕಾರ ಜಮೀನು ದುರಸ್ತಿಪಡಿಸಲು ಏಕವ್ಯಕ್ತಿಯ ಅರ್ಜಿಯ ಮೇರೆಗೆ ಡಿಡಿಎಲ್ಆರ್.ತುಮಕೂರು ಅವರಿಗೆ ಅನುಮತಿ ಕೋರಿ ಕಡತವನ್ನು ಕಳುಹಿಸಿಕೊಡಲಾಗಿತ್ತು. ಆ ಸಮಯದಲ್ಲಿ ನಮೂನೆ 1ರಿಂದ 5ನ್ನು ಭರ್ತಿ ಮಾಡಿ ಸರ್ಕಾರಿ ದರಕಾಸ್ತು ತಹಶೀಲ್ದಾರ್ ಹಾಗೂ ಅವರ ಸಿಬ್ಬಂದಿ ಉಪವಿಭಾಗಾಧಿಕಾರಿ ಹಾಗೂ ಅವರ ಕಛೇರಿ ಸಿಬ್ಬಂದಿ ಪರಿಶೀಲಿಸಿ ದೃಢೀಕರಿಸಿ ದುರಸ್ತಿಪಡಿಸಲು ನಮೂನೆ 1ರಿಂದ 5ರ ಜೊತೆಗೆ ಕಡತವನ್ನು ಕಳುಹಿಸಿರುತ್ತದೆ.

5. ತಹಶೀಲ್ದಾರ್, ಚಿಕ್ಕನಾಯಕನಹಳ್ಳಿ ಆದ ಅವರು ಮಾನ್ಯ ಜಿಲ್ಲಾಧಿಕಾರಿಗಳು ನೀಡಿರುವ ಆದೇಶದಂತೆ ಜಮೀನು ಮಂಜೂರಾಗಿರುವವರ ಹೆಸರಿಗೆ ದುರಸ್ತಿ ದಾಖಲೆಗಳನ್ನು ತಯಾರಿಸಿ ಮಂಜೂರಿ ಬಾಬ್ತು ರೆವಿನ್ಯೂ ನಕ್ಷೆಗೂ ಮತ್ತು ಪೋಡಿ ನಕ್ಷೆಗೂ ವ್ಯತ್ಯಾಸವಿದ್ದುದನ್ನು ಪರಿಶೀಲಿಸಿ ಸರ್ಕಾರಿ ಸುತ್ತೋಲೆ ಪ್ರಕಾರ ಭೂಮಾಪಕರು, ಪರ್ಯಾವೇಕ್ಷಕರು, ಕಂದಾಯ ನಿರೀಕ್ಷಕರು ಹಾಗೂ ಮಂಜೂರಿದಾರರು ಸ್ಥಳ ಪರಿಶೀಲನೆ ಮಾಡಿ ಪೋಡಿ ನಕ್ಷೆ ಮತ್ತು ಪೋಡಿ ತ:ಖ್ತೆಯಂತೆ ಮಂಜೂರಿದಾರರು ಸ್ವಾಧೀನದಲ್ಲಿರುವುದನ್ನು ಖಚಿತಪಡಿಸಿಕೊಂಡು ಪೋಡಿ ನಕ್ಷೆ ಮತ್ತು ಪೋಡಿ ತ:ಖ್ತೆಯನ್ನು ಸುತ್ತೋಲೆಯಂತೆ ದೃಢೀಕರಿಸಿ ದುರಸ್ತಿಪಡಿಸಲು ಆದೇಶ ಮಾಡಿರುತ್ತಾರೆಂದು ತಿಳಿಸಿರುತ್ತಾರೆ. ದುರಸ್ತಿ ಬಗ್ಗೆ ಸರ್ಕಾರಿ ಸುತ್ತೋಲೆಯ ಪ್ರಕಾರ ಎಲ್ಲ ವಿಧಾನವನ್ನು ಅನುಸರಿಸಿ ಕೆಳಹಂತದ ಅಧಿಕಾರಿಗಳಿಂದ ದಾಖಲೆಗಳನ್ನು ಹಾಗೂ ಸ್ಥಳಪರಿಶೀಲನೆ ಮಾಡಿಸಿ ಮುನ್ನೆಚ್ಚರಿಕೆ ಕ್ರಮಗಳನ್ನು ಪಾಲಿಸಿ ನಂತರ ಭೂದಾಖಲೆಗಳ ಉಪನಿರ್ದೇಶಕರಿಗೆ ಕಳುಹಿಸಿಕೊಟ್ಟಿರುತ್ತೇನೆಂದು ತಿಳಿಸಿರುತ್ತಾರೆ. ಈ ಪ್ರಕರಣದಲ್ಲಿ ಆಗಿನ ಉಪವಿಭಾಗಾಧಿಕಾರಿ ತಿಪಟೂರು ಅವರು ವಸ್ತುಸ್ಥಿತಿಯನ್ನು ಮರೆಮಾಡಿ ತಮ್ಮ ವೈಯಕ್ತಿಕ ಹಿತಾಸಕ್ತಿಯಿಂದ ದುರುದ್ದೇಶಪೂರಿತವಾಗಿ ಯಾವುದೇ ಮಂಜೂರು ಅಧಿಸೂಚನೆಗೊಳ್ಳದ, ದಾಲಾತಿಯಿಲ್ಲದ, ಅರಣ್ಯ ಇಲಾಖೆಗೆ ಅಂಬಾಪುರ ಸ.ನಂ.46ರ ಜಮೀನನ್ನು ನೀಡಲು ಹುನ್ನಾರನಡೆಸಿದ್ದು, ಹಾಗೂ ಮಂಜೂರುದಾರರಿಗೆ, ಕ್ರಯದಾರರಿಗೆ ತೊಂದರೆ ನೀಡಿ

ಅನ್ಯಾಯವೆಸಗುವ ಉದ್ದೇಶದಿಂದ ಇದು ಹಗರಣವೆಂಬಂತೆ ಸೃಷ್ಟಿಸಿದ್ದಾರೆ. ತಾವು ಯಾವುದೇ ಭೂಮಾಫಿಯಾದೊಂದಿಗೆ ಷಾಮೀಲಾಗಿಲ್ಲ ಮತ್ತು ಸರ್ಕಾರಿ ಅಥವಾ ಅರಣ್ಯ ಭೂಮಿಯನ್ನು ಮರುಮಂಜೂರು ಮಾಡಿಕೊಟ್ಟಿರುವುದಿಲ್ಲ. ಮಾನ್ಯ ಜಿಲ್ಲಾಧಿಕಾರಿಗಳ ಸೂಚನೆಯಂತೆ ಕ್ರಮವಹಿಸಿದ್ದೇನೆ ಎಂದು ತಿಳಿಸಿ ಅವರ ಮೇಲಿನ ಆರೋಪಗಳು ಸತ್ಯಕ್ಕೆ ದೂರವಾಗಿರುತ್ತವೆ ಮತ್ತು ಅವರನ್ನು ಪ್ರಕರಣದಿಂದ ಮುಕ್ತಾಯಮಾಡಬೇಕೆಂದು ಕೋರಿಕೊಂಡಿರುತ್ತಾರೆ.

6. 2ನೇ ಎದುರುದಾರರು ದಿನಾಂಕ: 14/01/2016ರ ಉಪವಿಭಾಗಾಧಿಕಾರಿ, ತುಮಕೂರು, ಇವರ ವರದಿಯ ಅನ್ವಯ 1964ರಲ್ಲಿ ಪಹಣಿ ಪತ್ರಿಕೆ ಚಾಲ್ತಿಗೆ ಬಂದ ಮೇಲೆ ಮೀಸಲು ಅರಣ್ಯ ಎಂಬುದನ್ನು ಕೈಬಿಟ್ಟಿರುವುದು ಕಂಡುಬಂದಿರುತ್ತದೆ. ನಂತರದಲ್ಲಿ ಗಣಕೀಕೃತ ಪಹಣಿಯಲ್ಲಾಗಲೀ ಅಥವಾ ಇತರೆ ದಾಖಲೆಗಳಲ್ಲಿ ಮೀಸಲು ಅರಣ್ಯ ಪ್ರದೇಶವೆಂದು ನಮೂದಾಗಿರುವುದಿಲ್ಲ ಆದ್ದರಿಂದ ದೂರುದಾರರು ಆಪಾದಿಸಿದಂತೆ ತಾವು ಯಾವುದೇ ಅಪರಾಧವನ್ನು ಮಾಡಿರುವುದಿಲ್ಲ, ಸದರಿ ಪ್ರಕರಣವನ್ನು ಅವಧಿ ಮೀರಿರುವ ದೂರು ಎಂದು ಪರಿಗಣಿಸಿ ವಜಾ ಮಾಡಬೇಕೆಂದು ಕೋರಿರುತ್ತಾರೆ.

7. 3ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಸರ್ಕಾರಿ ಸುತ್ತೋಲೆ ಸಂಖ್ಯೆ:ತಾ–ದರಕಾಸ್ತು ಪೋಡಿ ಆಂದೋಲನ 40/08–09 ದಿನಾಂಕ: 20/10/2008 ರಂತೆ ಸರ್ಕಾರಿ ಸರ್ವೆ ನಂಬರುಗಳಲ್ಲಿನ ಮಂಜೂರಾತಿಗೆ ಸಂಬಂಧಿಸಿದಂತೆ ನಮೂನೆ 1 ರಿಂದ 5ರಲ್ಲಿ ಮಂಜೂರಾತಿ ವಿವರಗಳನ್ನು ಭರ್ತಿ ಮಾಡುವ ಬಗ್ಗೆ ಕಂದಾಯ ಇಲಾಖೆಯ ಸಿಬ್ಬಂದಿ ಮತ್ತು ಅಧಿಕಾರಿಗಳಿಗೆ ಸೂಚನೆಯಿರುತ್ತದೆ. ಸ.ನಂ.46ರಲ್ಲಿ ಪೋಡಿದುರಸ್ತಿ ಸಂಬಂಧ ಪಕ್ಕಾ ಪೋಡಿ ತಯಾರಿಸುವ ಕಾರ್ಯವು ಅವರ ಅವಧಿಯಲ್ಲಿ ನಡೆದಿರುವುದಿಲ್ಲ, ಸದರಿ ದಾಖಲೆಗಳಿಗೆ ಅವರು ಸಹಿ ಮಾಡಿರುವುದಿಲ್ಲ. ಅವರ ವರ್ಗಾವಣೆಯಾದ ಸುಮಾರು 6 ತಿಂಗಳ ನಂತರ ಸದರಿ ಕಡತವನ್ನು ನಿರ್ವಹಿಸಿದ್ದು, ಅವರು ನಿರಪರಾಧಿಯಾಗಿರುತ್ತಾರೆಂದು ತಿಳಿಸಿರುತ್ತಾರೆ.

8. 4ನೇ ಎದುರುದಾರರು ಅಂಬಾಪುರ ಗ್ರಾಮದ ಸ.ನಂ.46ರ ಪೋಡಿ ಕಡತದಲ್ಲಿ ನಮೂನೆ 1ರಿಂದ 5ನ್ನು ಗ್ರಾಮಲೆಕ್ಕಿಗರು ಮತ್ತು ರಾಜಸ್ವ ನಿರೀಕ್ಷಕರು ತಯಾರಿಸಿರುತ್ತಾರೆ. ಪೋಡಿ ಅಂದೋಲನದಲ್ಲಿ ಹತ್ತಾರು ಕಡತಗಳನ್ನು ತಯಾರಿಸಿರುತ್ತಾರೆ. ಜಿಲ್ಲಾಧಿಕಾರಿಗಳು ಉಪವಿಭಾಗಾಧಿಕಾರಿಗಳು ಮತ್ತು ತಹಶೀಲ್ದಾರರ ಒತ್ತಡ ಹೆಚ್ಚಾಗಿದ್ದು, ಆ ಸಮಯದಲ್ಲಿ ಈ ಕಡತವನ್ನು ಅವರು ದೃಢೀಕರಿಸಿರುತ್ತಾರೆಂದು

ತಿಳಿಸಿರುತ್ತಾರೆ. ನಾಡಕಛೇರಿಗೆ ನಮೂನೆ 1–5ರ ಕಡತಗಳು ಹಾಗೂ ಎಲ್.ಎನ್.ಡಿ.ಕಡತಗಳು ರವಾನೆಯಾಗುತ್ತಿರಲಿಲ್ಲ ಆದ್ದರಿಂದ ಈ ಪ್ರಕರಣದಲ್ಲಿ ಅವರು ಭಾಗಿಯಾಗಿರುವುದಿಲ್ಲ ಎಂದು ತಿಳಿಸಿರುತ್ತಾರೆ.

9. 5ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಮಂಜೂರಿ ಜಮೀನು ದುರಸ್ತಿಗಾಗಿ ತುಮಕೂರು ಜಿಲ್ಲಾಧಿಕಾರಿಗಳು ಹಾಗೂ ಭೂದಾಖಲೆಗಳ ಉಪನಿರ್ದೇಶಕರು ಇವರ ಆದೇಶದಂತೆ ತಹಶೀಲ್ದಾರ್ ಕಛೇರಿಗೆ ಪ್ರಕರಣ ಬಂದಿದ್ದು, ನಂತರ ಅಳತೆ ಕಾರ್ಯವನ್ನು ಸಿ.ಆರ್.ಬಸವರಾಜ್, ಭೂಮಾಪಕರು ನಿರ್ವಹಿಸಿರುತ್ತಾರೆ. ಅಳತೆ ನಂತರ ತಪಾಸಣೆ ಭೂಮಾಪಕರು ತಪಾಸಣೆ ಮಾಡಿ ಆಕಾರ್ ಬಂದ್ ದುರಸ್ತಿ ಮಾಡಿರುತ್ತಾರೆ. ಪರ್ಯಾವೇಕ್ಷಕರು ಪರಿಶೀಲನೆಗೆ ಮಂಡಿಸಿರುವುದನ್ನು ಪರಿಶೀಲಿಸಿರುತ್ತಾರೆ. ಅದರಂತೆ ಅವರು 4ನೇ ಬ್ಲಾಕನ್ನು ಮಾತ್ರ ಪರಿಶೀಲನೆಮಾಡಿರುತ್ತಾರೆಂದು ತಿಳಿಸಿರುತ್ತಾರೆ. ಈ ಪ್ರಕರಣದ ಸರ್ವೆ ದಾಖಲೆ ಹಾಗೂ ಆರ್.ಟಿ.ಸಿ.ಗಳಲ್ಲಿ ಅರಣ್ಯ ಇಲಾಖೆಯೆಂದು ನಮೂದಾಗದ ಕಾರಣ ಸದರಿ ಸ.ನಂ.46ರಲ್ಲಿ ಪ್ರಕರಣ ಮಂಜೂರು ಜಮೀನು ದುರಸ್ತಿಯಾಗಿರುತ್ತದೆ. ಈ ಪ್ರಕರಣದಲ್ಲಿ ತಾವು ಯಾವುದೇ ತಪ್ಪು ಮಾಡಿರುವುದಿಲ್ಲ ಮತ್ತು ಅವರ ವಿರುದ್ಧ ಸುಳ್ಳು ಆಪಾದನೆಮಾಡಿರುತ್ತಾರೆಂದು ತಿಳಿಸಿರುತ್ತಾರೆ.

10. 6ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಜಿಲ್ಲಾಧಿಕಾರಿಗಳು ಹಾಗೂ ತಾಂತ್ರಿಕ ಸಹಾಯಕರಾದ ಶ್ರೀ ಈ ಪ್ರಕಾಶ್ ಅವರ ಮಾರ್ಗದರ್ಶನದಂತೆ 58 ಜನರಿಗೆ ಪೋಡಿಕೆಲಸವನ್ನು ನಿರ್ವಹಿಸಿರುತ್ತಾರೆ ಎಂದು ತಿಳಿಸಿರುತ್ತಾರೆ. ಆಗಿನ ತಿಪಟೂರು ಉಪವಿಭಾಗಾಧಿಕಾರಿ ಡಾ.ಪ್ರಜ್ಞ ಅಮ್ಮೆಂಬಳ ದುರುದ್ದೇಶ ಪೂರಿತವಾಗಿ ಕೆಳಹಂತದ ನೌಕರರ ಮೇಲೆ ಅಪವಾಧವನ್ನು ಹೊರೆಸಿ ಅವರನ್ನು ಅವಮಾನಿಸಿದ್ದಾರೆ. ಈ ಪ್ರಕರಣದಲ್ಲಿ ತಾವು ಯಾವುದೇ ತಪ್ಪು ಮಾಡಿರುವುದಿಲ್ಲ ಮತ್ತು ಅವರನ್ನು ಆರೋಪಮುಕ್ತಗೊಳಿಸಬೇಕೆಂದು ತಿಳಿಸಿರುತ್ತಾರೆ.

11. 7ನೇ ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಲು ಸಮಯ ಕೋರಿದ್ದು, ಯಾವುದೇ ಆಕ್ಷೇಪಣೆ ಸಲ್ಲಿಸಿರುವುದಿಲ್ಲ.

12. 8ನೇ ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿ, ಅವರು ಈ ಪ್ರಕರಣಕ್ಕೆ ಸಬಂಂಬಂಧಿಸಿದಂತೆ ಯಾವುದೇ ವರದಿ ನೀಡಿರುವುದಿಲ್ಲ ಮತ್ತು ಯಾವುದೇ ಅಪರಾಧವನ್ನು ಮಾಡಿರುವುದಿಲ್ಲ. ಕಾರಣ ಅವರನ್ನು ಈ ಪ್ರಕರಣದಿಂದ ಕೈಇಡಬೇಕೆಂದು ಕೋರಿರುತ್ತಾರೆ.

13. 9ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಅವರು ಕಡತವನ್ನು ಪರಿಶೀಲಿಸಿದ ಸಂದರ್ಭದಲ್ಲಿ ನಮೂನೆ 1-5ರಲ್ಲಿ ಎಲ್ಲೂ ಅರಣ್ಯ ಎಂದು ಇರಲಿಲ್ಲ. ಜಿಲ್ಲಾಧಿಕಾರಿಗಳು ಏಕವ್ಯಕ್ತಿ ಪ್ರಕರಣದಲ್ಲಿ ನೀಡಿರುವ ಆದೇಶದಂತೆ ಮಂಜೂರುದಾರರ ವಿಸ್ತೀರ್ಣಕ್ಕೆ ಅನುಗುಣವಾಗಿ ಪೋಡಿ ಮಾಡಿದ್ದನ್ನು ಪರಿಶೀಲಿಸಿರುತ್ತಾರೆಂದು ಹೇಳಿರುತ್ತಾರೆ. ಕೆಲವೊಂದು ಅರ್ಜಿಗಳಲ್ಲಿ ಮಂಜೂರಿದಾರರ ಬದಲಾಗಿ ಜಿಪಿಎ ದಾರರ ಸಹಿ ಮಾಡಿರುವ ಬಗ್ಗೆ ನೋಂದಣಿ ಜಿಪಿಎ ನೋಡಿ ಖಚಿತಪಡಿಸಿಕೊಂಡಿರುತ್ತೇನೆಂದು ತಿಳಿಸಿರುತ್ತಾರೆ. 9ನೇ ಎದುರುದಾರರು ಕಡತ ತಮ್ಮ ಕಛೇರಿಗೆ ಬಂದ 2 ದಿನಗಳಲ್ಲಿ ಪೂರ್ಣ ಪರಿಶೀಲಿಸಿ ಭೂಮಾಪಕರು ತಯಾರಿಸಿದ ಹಾಗೂ ಪರ್ಯಾವೇಕ್ಷಕರ ವರದಿಯಂತೆ ಒಂದೇ ಬಾರಿ 58 ಬ್ಲಾಕ್‌ಗಳನ್ನು ಸಹಿ ಮಾಡಿರುತ್ತೇನೆ. ಆದ್ದರಿಂದ ಅವರಿಂದ ಯಾವುದೇ ದುರುದ್ದೇಶದಿಂದ ಅಥವಾ ಖಾಸಗಿ ವ್ಯಕ್ತಿಗಳಿಗೆ ಲಾಭ ಮಾಡುವುದಕ್ಕಾಗಲೀ ಈ ಕೆಲಸ ಮಾಡಿರುವುದಿಲ್ಲವೆಂದು ತಿಳಿಸಿರುತ್ತಾರೆ. ಕಾರಣ ಅವರ ವಿರುದ್ಧ ಮಾಡಿದ ಆಪಾದನೆ ಕೈಬಿಡಬೇಕೆಂದು ಕೋರಿಕೊಂಡಿದ್ದಾರೆ.

14. ತಿಪಟೂರು ಉಪವಿಭಾಗಾಧಿಕಾರಿಗಳಾದ ಡಾ.ಪ್ರಜ್ಞಾ ಅಮ್ಮೆಂಬಳ ಅವರು ಸಲ್ಲಿಸಿದ ವರದಿಯ ಮೇರೆಗೆ ಜಿಲ್ಲಾಧಿಕಾರಿಗಳು ಪುನ: ಈ ಪ್ರಕರಣದ ಬಗ್ಗೆ ಮಧುಗಿರಿ ಉಪವಿಭಾಗಾಧಿಕಾರಿಗಳಿಂದ ತನಿಖೆ ಮಾಡಿಸಿರುತ್ತಾರೆ. ಸದರಿಯವರು ಕೂಡ ಎಲ್ಲ ಎದುರುದಾರರು ಅರಣ್ಯ ಇಲಾಖೆಗೆ ಸೇರಿದ ಜಮೀನನ್ನು 58 ಜನರಿಗೆ ದುರಸ್ತಿಮಾಡಿಸಿಕೊಟ್ಟಿರುವುದನ್ನು ದೃಡಪಡಿಸಿರುತ್ತಾರೆ. ಡಿಎಸ್.ಪಿ., ಕರ್ನಾಟಕ ಲೋಕಾಯುಕ್ತ, ತುಮಕೂರು, ಅವರು ಸಹ ಮಾನ್ಯ ಉಪಲೋಕಾಯುಕ್ತರ ಆದೇಶದಂತೆ ಈ ಪ್ರಕರಣದ ಬಗ್ಗೆ ತನಿಖೆ ನಡೆಸಿ ವರದಿ ಸಲ್ಲಿಸಿರುತ್ತಾರೆ. ಲೋಕಾಯುಕ್ತ ಪೋಲೀಸರು ಸಹ ಆರೋಪಿಗಳು ಮೇಲೆ ಆಪಾದಿಸಿದಂತೆ ಅಪರಾಧವನ್ನು ಮಾಡಿರುತ್ತಾರೆಂದು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ. ಪೋಲೀಸರ ವರದಿಯನ್ನು ಪರಿಶೀಲಿಸಿದಾಗ ಸದರಿಯವರು ಅಂದಿನ ಉಪವಿಭಾಗಾಧಿಕಾರಿ, ಡಾ.ಪ್ರಜಾ ಅಮ್ಮೆಂಬಳ ಅವರ ಹೇಳಿಕೆಯನ್ನು ಸಹ ಪಡೆದುಕೊಂಡಿರುತ್ತಾರೆ. ಈಗಿನ ತಿಪಟೂರು ಉಪವಿಭಾಗಾಧಿಕಾರಿಗಳು ಕೂಡ ದಿ.23.2.2018ರಂದು ತಮ್ಮ ವರದಿಯನ್ನು

ಸಲ್ಲಿಸಿರುತ್ತಾರೆ. ಸದರಿ ವರದಿಯಲ್ಲಿ ಸ್ಥಳಕ್ಕೆ ಭೇಟಿ ನೀಡಿ ಮತ್ತು ದಾಖಲೆಗಳನ್ನು ಪರಿಶೀಲಿಸಿದಾಗ ಅರಣ್ಯ ಇಲಾಖೆಯ ಜಮೀನನ್ನು ಖಾಸಗಿ ವ್ಯಕ್ತಿಗಳಿಗೆ ಎಲ್ಲ ಆಪಾದಿತರು ಸೇರಿ ದುರಸ್ತಿ ಮಾಡಿಕೊಟ್ಟಿರುವುದು ಕಂಡುಬರುತ್ತದೆ ಎಂದು ವರದಿ ಸಲ್ಲಿಸಿರುತ್ತಾರೆ.

15. ದೂರು, ದೂರುದಾರರು ಹಾಜರುಪಡಿಸಿದ ದಾಖಲೆಗಳನ್ನು ಹಾಗೂ ಎದುರುದಾರರು ಸಲ್ಲಿಸಿದ ಆಕೇಪಣೆಗಳು, ಅವರು ಹಾಜರುಪಡಿಸಿದ ದಾಖಲೆಗಳನ್ನು ಡಾ. ಪ್ರಜ್ಞಾ ಅಮ್ಮೆಂಬಳ ಅವರು ಸಲ್ಲಿಸಿದ ವರದಿ, ಲೋಕಾಯುಕ್ತ ಪೋಲೀಸರು ಸಲ್ಲಿಸಿದ ವರದಿಯನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, ಸ.ನಂ.46 ಸರ್ಕಾರಿ ಜಮೀನಾಗಿದ್ದು, ಅದರಲ್ಲಿ ಒಟ್ಟು 421.35 ಎಕರೆ ವಿಸ್ತೀರ್ಣ ಇರುವುದು ಕಂಡುಬರುತ್ತದೆ. ಆ ಪೈಕಿ 300 ಎಕರೆ ಮೀಸಲು ಅರಣ್ಯಕ್ಕೆ ವರ್ಗಾವಣೆಯಾಗಿತ್ತು. ಸದರಿ 300 ಎಕರೆ ಪೈಕಿ 91 ಎಕರೆ ಜಮೀನನ್ನು ತೋಟಗಾರಿಕೆ ಇಲಾಖೆಗೆ ನೀಡಿದ್ದು ಕಂಡುಬರುತ್ತದೆ. ಕರ್ನಾಟಕ ಲೋಕಾಯುಕ್ತದ ತನಿಖಾಧಿಕಾರಿಗಳು ಸಲ್ಲಿಸಿದ ವರದಿಯಲ್ಲಿ ಮೈಸೂರು ಮಹಾರಾಜರು ಹೊರಡಿಸಿದ ಅಧಿಸೂಚನೆಯನ್ನು ಹಾಜರುಪಡಿಸಿರುತ್ತಾರೆ. ಸದರಿ ಅಧಿಸೂಚನೆ ಸಂ.ಜಿಒಎಡಿ.2646–49–ಎಫ್.ಟಿ.–18–25–5 ದಿ.12.10.1926 ಎಂದು ಇದ್ದು ಸದರಿ ಅಧಿಸೂಚನೆಯಲ್ಲಿ ಒಟ್ಟು 300 ಎಕರೆ ಪ್ರದೇಶವನ್ನು ಮುತ್ತುಗದಹಳ್ಳಿ ರಾಜ್ಯ ಅರಣ್ಯವೆಂದು ಘೋಷಣೆಯಾಗಿ ಮೀಸಲು ಅರಣ್ಯ ಎ ಮತ್ತು ಬಿ ಬ್ಲಾಕ್ ಎಂದು ವಿಂಗಡಣೆ ಮಾಡಿ ಒಟ್ಟು 300 ಎಕರೆ ಪ್ರದೇಶವನ್ನು ಮುತ್ತುಗದಹಳ್ಳಿ ಎ ಬ್ಲಾಕ್ ಮೀಸಲು ಅರಣ್ಯ ಎಂಬುದಾಗಿ ಆದೇಶಿಸಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಸ.ನಂ.46ರಲ್ಲಿ ಒಟ್ಟು ಕಂದಾಯ ಜಮೀನು 121.35 ಎಕರೆ ಮಾತ್ರ ಇರುತ್ತದೆ. ಆದರೆ ಸರ್ಕಾರವು ಒಟ್ಟು 78 ಜನರಿಗೆ 225 ಎಕರೆ ಜಮೀನನ್ನು ಮಂಜೂರುಮಾಡಿರುತ್ತಾರೆ. ಕಂದಾಯ ಜಮೀನು 121.35 ಎಕರೆ ಇದ್ದಾಗ 225 ಎಕರೆ ಜಮೀನನ್ನು ಮಂಜೂರು ಮಾಡಲು ಬರುವುದಿಲ್ಲ. ಹೀಗಿದ್ದರೂ ಎದುರುದಾರರು ಸ್ಥಳ ಪರಿಶೀಲನೆ ಮಾಡದೆ ಸದರಿ ಮಂಜೂರುದಾರರು ಸ್ವಾಧೀನದಲ್ಲಿರುವುದನ್ನು ಪರಿಶೀಲಿಸದೆ ಪೋಡಿ ದುರಸ್ತಿಯನ್ನು ಮಂಜೂರುದಾರರ ಪರವಾಗಿ ಸ.ನಂ.46ರಲ್ಲಿ ಮಾಡಿಕೊಟ್ಟಿರುತ್ತಾರೆ. 2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಉಪವಿಭಾಗಾಧಿಕಾರಿ, ತುಮಕೂರು ಇವರ ವರದಿ ಅನ್ವಯ 1964ರಲ್ಲಿ ಪಹಣಿ ಪತ್ರಿಕೆ ಚಾಲ್ತಿಗೆ ಬಂದ ಮೇಲೆ ಮೀಸಲು ಅರಣ್ಯ ಎಂಬುದನ್ನು ಕೈಬಿಟ್ಟಿರುವುದು ಕಂಡುಬರುತ್ತದೆಂದು ತಿಳಿಸಿರುತ್ತಾರೆ. ಆದ್ದರಿಂದ ಸದರಿ ಸ.ನಂ.46ರಲ್ಲಿ ಮೀಸಲು ಅರಣ್ಯ ಜಮೀನು ಇತ್ತು ಎಂದು ಎದುರುದಾರರಿಗೆ ಗೊತ್ತಿತ್ತು ಎಂದು ತಿಳಿದುಬರುತ್ತದೆ. ಪಹಣಿ ಪತ್ರಿಕೆಯಲ್ಲಿ ಅಥವಾ ಗಣಕೀಕೃತ

ಪಹಣಿಯಲ್ಲಾಗಲೀ ಮೀಸಲು ಅರಣ್ಯ ಪ್ರದೇಶವೆಂದು ನಮೂದಾಗಿರುವುದಿಲ್ಲ. ಆದ್ದರಿಂದ ಎದುರುದಾರರು ಯಾವುದೇ ಅಪರಾಧ ಮಾಡಿಲ್ಲವೆಂದು ಹೇಳಿರುವುದನ್ನು ಒಪ್ಪಲು ಬರುವುದಿಲ್ಲ. ಎದುರುದಾರರು ಕಂದಾಯ ಅಧಿಕಾರಿಗಳಾಗಿದ್ದರಿಂದ ಎದುರುದಾರರಿಗೆ ಸದರಿ ಜಮೀನುಗಳು ಯಾರ ಖಾತೆಯಲ್ಲಿವೆ ಎಂಬುದನ್ನು ತಿಳಿದುಕೊಳ್ಳುವುದು ಅವರ ಕರ್ತವ್ಯವಾಗಿರುತ್ತದೆ. ಮಾನ್ಯ ಸರ್ವೋಚ್ಛ ನ್ಯಾಯಾಲಯವು (2007)15 ಎಸ್.ಸಿ.ಸಿ. 744 (ಕರ್ನಾಟಕ ರಾಜ್ಯ–ವಿರುದ್ದ–ಐ.ಎಸ್.ನಿರ್ವಾಣೇಗೌಡ) ನೇದ್ದರಲ್ಲಿ "When the lands were included in reserve forest, the entries in the revenue records were of no consequence and further, mere saguvali chits did not confer any title on the suit lands. This apart, the Revenue Authorities were not competent to deal with the property which was the part of the reserved forest" ಎಂದು ಆದೇಶಿಸಿರುತ್ತದೆ.

16. ಕಡತದಲ್ಲಿನ ದಾಖಲೆಗಳನ್ನು ಪರಿಶೀಲಿಸಿದಾಗ ಅಂಬಾಪುರ ಗ್ರಾಮದ ಸ.ನಂ.46ರ ದುರಸ್ತಿ ಕಾರ್ಯದ ಸಂಬಂಧ ರೆವಿನ್ಯೂ ಸ್ಕೆಚ್ ಹಾಗೂ ಪೋಡಿ ಸ್ಕೆಚ್‌ಗೂ ವ್ಯತ್ಯಾಸವಿರುವುದು ಕಂಡುಬಂದಿರುತ್ತದೆ. ಒಟ್ಟು 167.07 ಎಕರೆ ವಿಸ್ತೀರ್ಣವನ್ನು ದುರಸ್ತಿಮಾಡಿರುವುದು ಕಂಡುಬರುತ್ತದೆ. ಅರಣ್ಯ ಇಲಾಖೆಗೆ ಸೇರಿದ 209 ಎಕರೆ ವಿಸ್ತೀಣದಲ್ಲಿ 77.07 ಎಕರೆ ವಿಸ್ತೀರ್ಣವು ದುರಸ್ತಿಯಾಗಿರುವುದು ಕಂಡುಬರುತ್ತದೆ. ಕಂದಾಯ ಇಲಾಖೆಯ ಗೋಮಾಳ ಜಮೀನಿನಲ್ಲಿ 121.35 ಎಕರೆ ವಿಸ್ತೀರ್ಣದ ಪೈಕಿ 71.21 ಎಕರೆ ದುರಸ್ತಿಯಾಗಿರುತ್ತದೆ ಹಾಗೂ ತೋಟಗಾರಿಕೆ ಇಲಾಖೆಯ 91 ಎಕರೆ ಪೈಕಿ 1.20 ಎಕರೆ ದುರಸ್ತಿಯಾಗಿರುತ್ತದೆಂದು ಕಂಡುಬರುತ್ತದೆ. 1ನೇ ಎದುರುದಾರರು ತಹಶೀಲ್ದಾರ್, ಚಿಕ್ಕನಾಯಕನಹಳ್ಳಿ ಹಾಗೂ ಇತರೆ ಅಧಿಕಾರಿಗಳು ದುರಸ್ತಿ ಮಾಡಿದ ನಂತರ ಹೊಸ ಸರ್ವೆ ನಂ.75ರಿಂದ 137 ಎಂದು ನೀಡಿರುತ್ತಾರೆಂದು ಆಗಿನ ಉಪವಿಭಾಗಾಧಿಕಾರಿಯವರ ವರದಿಯಿಂದ ಕಂಡುಬರುತ್ತದೆ. ಉಪವಿಭಾಗಾಧಿಕಾರಿಗಳಾದ ಡಾ. ಪ್ರಜ್ಞಾ ಅಮ್ಮೆಂಬಳ ಅವರು ಸ್ಥಳಕ್ಕೆ ಖುದ್ದಾಗಿ ಭೇಟಿ ನೀಡಿದಾಗ ಸರ್ವೆ ನಂ.46ರಲ್ಲಿ ಯಾರೂ ಸಾಗುವಳಿ ಮಾಡಿರುವುದು ಕಂಡುಬಂದಿರುವುದಿಲ್ಲ ಹಾಗೂ ಸದರಿ ಜಮೀನಿನಲ್ಲಿ ಕುರುಚಲು ಗಿಡಗಳು ಇರುತ್ತವೆಂದು ತಿಳಿಸಿರುತ್ತಾರೆ. ಈ ಪ್ರಕರಣದ ಎಲ್ಲ ದಾಖಲೆಗಳನ್ನು ಪರಿಶೀಲಿಸಿದಾಗ ಅರಣ್ಯ ಭೂಮಿಯಲ್ಲಿ ಅಕ್ರಮವಾಗಿ ಪೋಡಿ ದುರಸ್ತಿ ಮಾಡಿ ಕರ್ತವ್ಯಲೋಪವೆಸಗಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಅಲ್ಲದೆ ಭೂಮಾಪಕರು ಹಾಗೂ

ಭೂದಾಖಲೆಗಳ ಸಹಾಯಕ ನಿರ್ದೇಶಕರು ಪರ್ಯಾವೇಕ್ಷಕರು, ಸ್ಥಳಕ್ಕೆ ಭೇಟಿನೀಡದೆ ಪೋಡಿ ಮಾಡಿ ಸ್ಕೆಚ್ ತಯಾರಿಸಿರುವುದು ಕಂಡುಬರುತ್ತದೆ. ಎದುರುದಾರರು ಭೂಮಾಫಿಯಾರೊಂದಿಗೆ ಕೈಜೋಡಿಸಿ ಅತಿ ತುರ್ತು ಕಾರ್ಯ ಎಂಬಂತೆ ದಾಖಲೆಗಳನ್ನು ತಯಾರಿಸಿರುವುದು ಕಂಡುಬರುತ್ತದೆ.

17. ಎದುರುದಾರರು ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕು ಅಂಬಾಪುರ ಗ್ರಾಮದ ಸ.ನಂ.46ರಲ್ಲಿ ಅರಣ್ಯ, ತೋಟಗಾರಿಕೆ ಮತ್ತು ಕಂದಾಯ ಇಲಾಖೆಗಳಿಗೆ ಸೇರಿದ ಜಮೀನನ್ನು (ಒಟ್ಟು 167.07 ಎಕರೆ) ಖಾಸಗಿ ವ್ಯಕ್ತಿಗಳಿಗೆ ಅಕ್ರಮವಾಗಿ ದುರಸ್ತಿ ಮಾಡಿಕೊಟ್ಟಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

18. ಆದ್ದುದರಿಂದ, ಮೇಲಿನ ಕಾರಣ ಹಾಗೂ ಕಡತದಲ್ಲಿನ ಆಧಾರಗಳಿಂದ, ತುಮಕೂರು ಜಿಲ್ಲೆ, ಚಿಕ್ಕನಾಯಕನಹಳ್ಳಿ ತಾಲ್ಲೂಕು, ಅಂಬಾಪುರ ಗ್ರಾಮದ ಸರ್ವೆ ನಂ. 46ರಲ್ಲಿ ಅರಣ್ಯ, ತೋಟಗಾರಿಕೆ ಮತ್ತು ಕಂದಾಯ ಇಲಾಖೆಗಳಿಗೆ ಸೇರಿದ ಒಟ್ಟು 167.07 ಎಕರೆ ಜಮೀನನ್ನು ಖಾಸಗಿ ವ್ಯಕ್ತಿಗಳಿಗೆ ಅಕ್ರಮ ದುರಸ್ಥಿ ಮಾಡಿಕೊಟ್ಟಿರುವುದನ್ನು ರದ್ದುಪಡಿಸಿ, ಪುನಹ: ಕ್ರಮವಾಗಿ

(ಅ) ಅರಣ್ಯ ಇಲಾಖೆಗೆ 77.07 ಎಕರೆ, ತೋಟಗಾರಿಕೆ ಇಲಾಖೆಗೆ 1.20 ಎಕರೆ ಮತ್ತು ಕಂದಾಯ ಇಲಾಖೆಗೆ 71.21 ಎಕರೆ ಜಮೀನುಗಳ ಖಾತೆ ಪಹಣಿ ಮಾಡಲು ಮತ್ತು,

(ಆ) ಸರ್ವೆ ನಂ. 46ರಲ್ಲಿ ಮೈಸೂರು ಮಹಾರಾಜರ ಆದೇಶದಂತೆ ಒಟ್ಟು 300 ಎಕರೆ ಮುತ್ತುಗದಹಳ್ಳಿ ಮೀಸಲು ಅರಣ್ಯಕ್ಕೆ 1926ರಲ್ಲಿ ಮಂಜೂರಾದ ಜಮೀನು 1960ರಲ್ಲಿ ಪಹಣಿ ಬಂದಾಗ ಅರಣ್ಯ ಇಲಾಖೆಯ ಹೆಸರು ಬಿಟ್ಟು ಹೋಗಿರುವುದನ್ನು ಸರಿಪಡಿಸುವಂತೆ, ಅದರಲ್ಲಿ ಸದರಿ 300 ಎಕರೆ ಜಮೀನು ಪೈಕಿ ಸರ್ಕಾರವು 91 ಎಕರೆಯನ್ನು ತೋಟಗಾರಿಕೆ ಇಲಾಖೆಗ ಮಂಜೂರು ಮಾಡಿರುತ್ತದೆ. ಆದ್ದರಿಂದ, ಉಳಿದ 209 ಎಕರೆಯನ್ನು ಅರಣ್ಯ ಇಲಾಖೆಯ ಹೆಸರಿಗೆ ಖಾತೆ ಪಹಣಿ ಮಾಡುವ ಬಗ್ಗೆ

ಸೂಕ್ತ ಕ್ರಮ ಜರುಗಿಸಬೇಕಾಗಿ ನಿರ್ದೇಶಿಸಿ ಶಿಸ್ತು ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ಮಾಡಿದೆ.

19. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ **ಒಂದು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

N. Anand 6/4

**[ನ್ಯಾಯಮೂರ್ತಿ ಎನ್. ಆನಂದ]**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ, ಬೆಂಗಳೂರು.**